ಸಾಕ್ಷಿಯನ್ನು ದಿನಾಂಕಃ 31.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ

ನಿ.ಪಿ.-1 ಕ್ರಯದ ಕರಾರು ಒಪ್ಪಂದ ಪತ್ರವನ್ನು 1 ನೇ ಪ್ರತಿವಾದಿ ವಾದಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕುವಂತೆ ವಾದಿಯವರು ನನ್ನನ್ನು ಉಪ-ನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡುವ ಮೊದಲು ವಾದಿ ಹಾಗು ಪ್ರತಿವಾದಿಗಳ ನಡುವೆ ಏನು ವ್ಯವಹಾರ ನಡೆದಿರುತ್ತದೆಂದು ನನಗೆ ಗೊತ್ತಿರುತ್ತದೆ. ಅವರುಗಳ ನಡುವೆ ಮಾತುಕತೆಯಾಗುವಾಗ ನಾನು ಇದ್ದಿರುತ್ತೇನೆ. ಸದರಿ ಮಾತುಕತೆ ಉಪ-ನೋಂದಣಾಧಿಕಾರಿಗಳ ಕಛೇರಿಯ ಬಳಿ ಆಗಿರುತ್ತದೆ. ಆಗ ವಾದಿ, ಪ್ರತಿವಾದಿಗಳು ನಾನು ಹಾಗು ವಜ್ರೇಗೌಡ ಇದ್ದಿರುತ್ತೇವೆ. ನಿ.ಪಿ.-1 ಪತ್ರವನ್ನು ಬರೆಯುವಾಗ ವಾದಿಯು ಪ್ರತಿವಾದಿಗಳಿಂದ ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ ಆದರೆ ಅವು ಏನು ದಾಖಲೆಗಳೆಂದು ನನಗೆ ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ವಾದಿ ಹಾಗು ಪ್ರತಿವಾದಿಗಳ ನಡುವೆ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಇದ್ದು ಹಾಗು 2 ನೇ ಪ್ರತಿವಾದಿಗೆ ಎಸ್.ಬಿ.ಐ. ಬ್ಯಾಂಕಿನಲ್ಲಿ ಸಾಲ ತೀರಿಸುವ ಸಲುವಾಗಿ ಹಣದ ಅವಶ್ಯಕತೆ ಇದ್ದು ಆ ಸಂಬಂಧ ವಾದಿಯಿಂದ ರೂ. 2,00,000/- ಸಾಲ ಪಡೆದು ಅದರ ಭದ್ರತೆಗಾಗಿ ನಿ.ಪಿ.-1 ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಿ.ಪಿ.-1 ರಲ್ಲಿ ತಿಳಿಸಿರುವ ಆಸ್ತಿ ಸುಮಾರು 03 ಎಕರೆ ಇರುತ್ತದೆ. ಸದರಿ ಆಸ್ತಿಗೆ 01 ಎಕರೆಗೆ ಎಷ್ಟು ಬೆಲೆ ಇರುತ್ತದೆಂದು

ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಎಕರೆ 01 ಕ್ಕೆ ಸುಮಾರು ರೂ. 20,00,000/– ರಿಂದ ರೂ. 30,00,000/– ಬೆಲೆ ಇರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಹಾಗು ವಾದಿ ಒಂದೇ ಊರಿನವರರಾಗಿದ್ದು, ಅನ್ಯೋನ್ಯವಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**